ಶ್ರೀ ಜ್ಞಾನದೇವ ದೊಡ್ಡಮೇಟಿ —ಸ್ವಾಮಿ, ಗಜೇಂದ್ರಗಡದಲ್ಲಿ ಪಶುವೈದ್ಯ ಕೇಂದ್ರದ ಕಟ್ಟಡ ಇದೆ. ಅದು ಲೋಕೋಪಯೋಗಿ ಕಛೇರಿಯಲ್ಲಿದೆಯೋ, ನಗರಸಭೆಯ ಕಛೇರಿಯಲ್ಲಿದೆಯೋ ಗೊತ್ತಿಲ್ಲ; ಅನಾಥ ಕಟ್ಟಡದ ಸುರಕ್ಷಣೆಯನ್ನು ಯಾರು ಮಾಡಬೇಕು ?

ಶ್ರೀ ಅಬ್ದುಲ್ ನಜೀರ್ ಸಾಬ್ — ಸ್ವಾಮಿ, ಈ ವಿಚಾರದಲ್ಲಿ ನಾನು ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎನ್.ಆರ್.ಇ.ಪಿ. ಯೋಜನೆಯಲ್ಲಿ ಪಶುವೈದ್ಯ ಕೇಂದ್ರಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಕಾರಣ 15,000ಕ್ಕೆ ಮೇಲ್ಪಟ್ಟು ಹಣ ಸಿಗುವುದಿಲ್ಲ. ಮಾನ್ಯ ಸದಸ್ಯರ ತಾಲ್ಲೂಕು ಡಿ.ಪಿ.ಎ.ಪಿ. ಯೋಜನೆಯಲ್ಲಿ ಬರುತ್ತದೆ; ಹಾಲಿನ ಮಂಡಲಿಯವರು ಸ್ವಲ್ಪ ಕಾಂಟ್ರಿಬ್ಯೂಷನ್ ಕೊಟ್ಟರೆ ಒಂದು ಲಕ್ಷ ರೂಪಾಯಿ ಕಟ್ಟಡ ಕಟ್ಟಬಹುದು.

ಶ್ರೀ ಎ. ಬಿ. ಶಾನಪ್ಪ —ಗ್ರಾಮಾಂತರ ಪ್ರದೇಶಗಳಲ್ಲಿ ಪಶುವೈದ್ಯ ಕೇಂದ್ರಗಳನ್ನು ಕಟ್ಟಬೇಕಾದರೆ; ಜಮೀನು ಕೊಡಬೇಕು; ಮತ್ತೊಂದು ಕೊಡಬೇಕೆಂದು ಹೇಳುತ್ತಾರೆ; ಗ್ರಾಮೀಣ ಮಂತ್ರಿಯವರೇ ಕಟ್ಟಡ ಕಟ್ಟಿಸಿಕೊಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಅಬ್ದುಲ್ ನಜೀರ್ ಸಾಬ್ — ಆಗುವುದಿಲ್ಲ.

ಅಧ್ಯಕ್ಷರು.— ಪ್ರಶ್ನೆ 214 ಶ್ರೀ ಟಿ.ಪಿ. ಬೋರಯ್ಯ,—ಸದಸ್ಯರಿಲ್ಲ. ಮುಂದಿನ ಪ್ರಶ್ನೆ ಶ್ರೀ ವಸಂತ ಬಂಗೇರಾ

ವಿಷಯ : ಕಬಿನಿ ನಾಲಾ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆ ಬೆಳೆಯುವ ಯೋಜನೆ

ಪ್ರಶ್ನೆ : 204 (490) ಟಿ.ಪಿ. ಬೋರಯ್ಯ (ಬನ್ನೂರು). — ಮೊನ್ನೆ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕಬಿನಿ ನಾಲಾ ಅಚ್ಚುಕಟ್ಟಿನಲ್ಲಿ ಸರಕಾರದವರೇ ಬೆಳೆಯುವ ಕಾರ್ಯಕ್ರಮ ಇದೆಯೇ ;

ಆ) ಹಾಗಿದ್ದಲ್ಲಿ ಅಲ್ಲಿ ಬೆಳೆಯುವ ಬೆಳೆಗಳ ವಿವರಗಳನ್ನು ಹಾಗೂ ಬೆಳೆಯುವ ಬೆಳೆಗಳ ಉತ್ಪನ್ನಗಳನ್ನು ಸಂಸ್ಕರಿಸುವ ಘಟಕಗಳನ್ನು ಸರಕಾರದ ವತಿಯಿಂದ ಸ್ಥಾಪಿಸಲು ಹಾಕಿಕೊಂಡಿರುವ ಕಾರ್ಯಕ್ರಮಗಳೇನು ?

ಉತ್ತರ : ಶ್ರೀ ಬಿ.ಎಲ್. ಗೌಡ (ಕೃಷಿ ಸಚಿವರು).— ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಮಾನ್ಯ ಸದಸ್ಯರು ಹಾಜರಿರಲಿಲ್ಲ

ವಿಷಯ : ಸರಕಾರಿ ಕಛೇರಿಗಳಿಗೆ ಲೇಖನ ಸಾಮಗ್ರಿಗಳ ಸರಬರಾಜು

ಪ್ರಶ್ನೆ : 215 (801) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ). — ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದ ಆರಕ್ಷಕ ಠಾಣೆ ಖಜಾನೆ, ತಾಲ್ಲೂಕು ಕಛೇರಿಗಳೇ ಮುಂತಾದ ಸರ್ಕಾರಿ ಕಛೇರಿಗಳಿಗೆ ಲೇಖನ ಸಾಮಗ್ರಿ ಪುಸ್ತಕ ನಮೂನೆಗಳ ಸರಬರಾಜು ಸಾಕಷ್ಟು ಪ್ರಮಾಣದಲ್ಲಿ ಆಗುತ್ತಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮವೇನು ?

ಉತ್ತರ : ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).— ಅ) ರಾಜ್ಯದ ಹಲವು ಸರ್ಕಾರಿ ಕಛೇರಿಗಳಿಗೆ ವಿದ್ಯುಚ್ಛಕ್ತಿ ಅಡಚಣೆ, ಕಾಗದ ಇತ್ಯಾದಿ ಸಾಮಗ್ರಿಗಳ ಅಭಾವ, ಮುದ್ರಣಾಲಯಗಳಲ್ಲಿಯ ಕಾರ್ಮಿಕ ಅಶಿಸ್ತು, ಈ ಕಾರಣಗಳಿಂದಾಗಿ ಹಲವೊಮ್ಮೆ ಅವರು ಕೋರಿದಷ್ಟು ಫಾರ್ಮುಗಳ ಬೇಡಿಕೆಗಳನ್ನು ಪೂರ್ತಿಯಾಗಿ ಒದಗಿಸಲು ಸಾಧ್ಯವಾಗಲಿಲ್ಲ. ಇನ್ನು ಕೆಲವು ಸಂದರ್ಭಗಳಲ್ಲಿ ಅತಿಹೆಚ್ಚು ಬೇಡಿಕೆಗಳನ್ನು ಹೂಡಿರುವುದರ ಪ್ರಯುಕ್ತ ಅಷ್ಟು ಬೇಡಿಕೆಗಳನ್ನು ಪೂರೈಸಲಾಗಲಿಲ್ಲ.

ಲೇಖನ ಸಾಮಗ್ರಿಗಳ ಬಗ್ಗೆ ಸಹ ಆಗಸ್ಟ್ 1983 ರಿಂದ ಲೇಖನ ಸಾಮಗ್ರಿಗಳ ಕೊಳ್ಳುವಿಕೆಯಲ್ಲಿ ನೂರಕ್ಕೆ ನೂರರಷ್ಟು ಕಡಿತ ಮಾಡಿ ಹೊರಡಿಸಿದ ಸರ್ಕಾರದ ವಿತವ್ಯಯದ ಆಜ್ಞೆಯ ದೆಸೆಯಿಂದ ಹಲವು ರೀತಿಯ ಸಾಮಗ್ರಿಗಳನ್ನು ಸರಬರಾಜು ಮಾಡಲು ಸಾಧ್ಯವಾಗಿಲ್ಲ. ಆದಾಗ್ಯೂ ಇತ್ತೀಚೆಗೆ ಸದರಿ ಸಾಮಗ್ರಿಗಳ ಕೋರಿಕೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಅರ್ಹತೆ ಇರುವಷ್ಟು ಪೂರೈಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಇಂತಹ ಸಂದರ್ಭಗಳಲ್ಲಿ ಜರೂರು ಅವಶ್ಯಕತೆಯನ್ನು ಗಮನದಲ್ಲಿಟ್ಟು, ಅಂತಹ ಫಾರ್ಮುಗಳ ಮುದ್ರಣಕ್ಕೆ ಸರ್ಕಾರಿ ಮುದ್ರಣಾಲಯಗಳಲ್ಲಿ, ಸರ್ಕಾರಿ ಸ್ವಾಮ್ಯದಲ್ಲಿರುವ ಲೋಕ ಶಿಕ್ಷಣ ಟ್ರಸ್ಟ್ ಇಂತಹ ಸಂಸ್ಥೆಗಳ ಮುದ್ರಣಾಲಯಗಳಲ್ಲಿ ಮತ್ತು ಹಲವು ಬಾರಿ ಖಾಸಗಿ ಮುದ್ರಣಾಲಯಗಳಲ್ಲಿ ಸಹ ಮುದ್ರಣಕ್ಕೆ ವಿಶೇಷ ವ್ಯವಸ್ಥೆ ಮಾಡಿ ಸರಬರಾಜು ಮಾಡುವ ಏರ್ಪಾಡು ಮಾಡಲಾಗಿದೆ. ಕೆಲವು ಬಾರಿ ಮುದ್ರಣ ಸಾಮಗ್ರಿಗಳು ಮತ್ತು ಇನ್ನು ಇತರ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಲು ತೊಂದರೆ ಇದ್ದಾಗ, ಜರೂರಾಗಿ ಸ್ಥಳೀಯವಾಗಿ ಈ ವಸ್ತುಗಳನ್ನು ಕೊಳ್ಳಲು ಸ್ಥಳೀಯ ಅಧಿಕಾರಿಗಳಿಗೆ ಪರವಾನಿಗೆಯನ್ನು ಸಹ ಕೊಡಲಾಗಿದೆ,